ದಿನಾಂಕ : 26.10.2023
ಅಸಲು ದಾವೆ: 61/2020
ಮತ್ತು 75/2022
ಪಿ.ಡಬ್ಲ್ಯು: 3

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : 1 ರಿಂದ 3 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎ.ಜಿ ರವರಿಂದ :</u>**

ವಾದಿಯ ತಂದೆ ಕೃಷ್ಣೇಗೌಡ ಅವರ ಬಾವಮೈದನಿಗೆ ನನ್ನ ತಂಗಿ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಚಿಕ್ಕಮ್ಮನ ಮಗಳನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯನ್ನು 1 ನೇ ಪ್ರತಿವಾದಿ ದತ್ತು ತೆಗೆದುಕೊಂಡಿದ್ದು ದತ್ತು ಪತ್ರಕ್ಕೆ ಸಹಿ ಮಾಡಲು ನನ್ನನ್ನು ಮದ್ದೂರಿಗೆ ಕರೆಸಿದ್ದರು. ದತ್ತು ಪತ್ರಕ್ಕೆ ನಾನು ಕೂಡ ಸಹಿ ಮಾಡಿರುತ್ತೇನೆ. ನವೆಂಬರ್ 2018 ರಂದು ದತ್ತು ಪತ್ರ ದಾಖಲೆ ನೊಂದಣಿಯಾಗಿರುತ್ತದೆ. ದತ್ತು ಪತ್ರ ಆದ ಮೇಲೆ ಹುಡುಗನನ್ನು 1 ನೇ ಪ್ರತಿವಾದಿ ಕರೆದುಕೊಂಡು ಹೋಗಿರುತ್ತಾರೆ. ದತ್ತು ಪ್ರಕ್ರಿಯೆ ಎಲ್ಲಿ ನಡೆದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದತ್ತು ಪತ್ರಕ್ಕೆ ಸಹಿ ಮಾಡಿರುವುದನ್ನು ಬಿಟ್ಟು ನನಗೆ ಬೇರೆ ವಿಚಾರಗಳು ಗೊತ್ತಿರುವುದಿಲ್ಲ. ಪತ್ರಕ್ಕೆ ಸಹಿ ಮಾಡುವಾಗ 1 ನೇ ಪ್ರತಿವಾದಿ, ಕೃಷ್ಣೇಗೌಡ ಮತ್ತು ಅವರ ಹೆಂಡತಿ ನಾನು ಹಾಗೂ ಚಿಕ್ಕಪುಟ್ಟೇಗೌಡ ಮತ್ತು ಸುರೇಶ ಹಾಜರಿದ್ದೆವು. ನಾವೆಲ್ಲ ಬಂದ ನಂತರ ದತ್ತು ಪತ್ರವನ್ನು ಬರೆಸಿರುತ್ತಾರೆ. ಅದರಲಿ ಏನೆಲ್ಲಾ ಬರೆದಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಆಸ್ತಿಯ ವಿವರಗಳು ದತ್ತು ಪತ್ರದಲ್ಲಿ ಬರಸಿದ್ದು, ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪತ್ರದಲ್ಲಿ ದತ್ತು ಹೇಗೆ ತೆಗೆದುಕೊಳ್ಳುವುದು ಮತ್ತು ಕೊಡುವುದು ಎಂದು ಬರೆದಿರುತ್ತಾರಾ ಎಂದರೆ ಸಾಕ್ಷಿಯು ನಾನು ದಾಖಲೆಗೆ ಸಹಿ ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

ಪತ್ರ ಬರೆಸಿದ ನಂತರ ಹುಡುಗ 1 ನೇ ಪ್ರತಿವಾದಿ ಮನೆಯಲ್ಲಿ ವಾಸವಾಗಿದ್ದ. ಸುಮಾರು ಒಂದುವರೆ - ಎರಡು ವರ್ಷ 1 ನೇ ಪ್ರತಿವಾದಿ ಮನೆಯಲ್ಲಿ ಹುಡುಗ ವಾಸವಾಗಿದ್ದ. ಆಮೇಲೆ 1 ನೇ ಪ್ರತಿವಾದಿಯ ಮನೆಯನ್ನು ಹುಡುಗ ಏಕೆ ಬಿಟ್ಟುಹೋಗಿರುತ್ತಾನೆ ಎಂದು ನನಗೆ

ಗೊತ್ತಿರುವುದಿಲ್ಲ. ದತ್ತುಗೆ ಬಂದ ಮೇಲೆ ಕೊಕ್ಕರೆ ಬೆಳ್ಳೂರಿನಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ. ದತ್ತು ಪತ್ರ ಬರೆಸುವಾಗ ಹುಡುಗನಿಗೆ 9 ರಿಂದ 10 ವರ್ಷ ವಯಸ್ಸಾಗಿತ್ತು. 1 ನೇ ಪ್ರತಿವಾದಿ ಪತ್ರ ದತ್ತು ಪತ್ರ ಎಂದು ಹೇಳಿರುವುದಿಲ್ಲ, ಅದು ಆಸ್ತಿಗಳನ್ನು ವ್ಯವಸಾಯ ಮಾಡಲು ಭದ್ರತೆಗೋಸ್ಕರ ದಾಖಲೆ ಮಾಡುವುದಾಗಿ ಹೇಳಿ 1 ನೇ ಪ್ರತಿವಾದಿ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪತ್ರ ಬರೆಸುವ ಸಮಯದಲ್ಲಿ, 1 ನೇ ಪ್ರತಿವಾದಿ ಗಂಡ ತೀರಿಕೊಂಡು 20 ವರ್ಷ ಆಗಿತ್ತು. ನಾನು, ಕೃಷ್ಣೇಗೌಡ, ಅವರ ಹೆಂಡತಿ ಮತ್ತು ಸಾಕ್ಷಿದಾರರು ಎಲ್ಲರೂ ಸೇರಿಕೊಂಡು ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದತ್ತು ಪತ್ರ ಅಲ್ಲ ಎಂದು ನನಗೆ ಗೊತ್ತಿದ್ದರೂ ಸಹಾ ವಾದಿ ನನ್ನ ಸಂಬಂಧಿಕಾರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.